**9 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ,**
**ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು.**

**ಎಸ್.ಸಿ.ನಂ.137/2020**

(ಚಾ.ಸಾ.10/ಪ್ರಾ.ಸಾ.5)

ತಾಃ 17.06.2025 ರಂದು ಸಾಕ್ಷಿಗೆ ಪ್ರಮಾಣ ವಚನ ಮಾಡಿಸಲಾಯಿತು.

| | |
|---|---|
| ಸಾಕ್ಷಿದಾರರ ಹೆಸರು: | ಚಂದ್ರ |
| ತಂದೆಯ ಹೆಸರು | ರುದ್ರಮುನಿ |
| ವಯಸ್ಸು | 41 ವರ್ಷ |
| ಉದ್ಯೋಗ | ಖಾಸಗಿ ಕೆಲಸ |
| ವಾಸ ಸ್ಥಳ | ಲಗ್ಗೆರೆ, ಬೆಂಗಳೂರು |

**ಮುಖ್ಯ ವಿಚಾರಣೆಃ ಸರ್ಕಾರಿ ಅಭಿಯೋಜಕರಿಂದಃ**

ನನಗೆ ಚಾಸಾ.1 ರವರ ಪರಿಚಯ ಇಲ್ಲ. ಈಗ ತೋರಿಸಿದ ನಿ.ಪಿ.4 ರ ಪಂಚನಾಮೆಯಲ್ಲಿ ನನ್ನ ಸಹಿ ಇದೆ. ಸಾಕ್ಷಿಯ ಸಹಿಯನ್ನು ನಿ.ಪಿ.4(ಬಿ) ಎಂದು ಗುರುತಿಸಲಾಯಿತು. ಸುಮಾರು 5 ವರ್ಷಗಳ ಹಿಂದೆ ಬ್ಯಾಡರಹಳ್ಳಿ ಗ್ರಾಮದ ಕೆರೆಯ ಹತ್ತಿರ ಪ್ರಸನ್ನ ಕುಮಾರ್ ರವರ ಶವ ಬಿದ್ದಿದ್ದ ಸ್ಥಳದಲ್ಲಿ ಪಂಚನಾಮೆ ಮಾಡಿ ನನ್ನ ಸಹಿ ಪಡೆದಿದ್ದಾರೆ. ಮೃತನ ಶವವನ್ನು ನೋಡಿದಾಗ ಆತನ ಮೈಮೇಲೆ ಬಟ್ಟೆ ಇದ್ದು ಆತನ ತಲೆಯ ಮೇಲೆ ಎರಡು ಏಟುಗಳು ಬಿದ್ದಿದ್ದ ಗುರುತು ಇದ್ದವು. ಮೃತನ ಶರೀರವನ್ನು ಪೊಲೀಸರು ಮರಣೋತ್ತರ ಪರೀಕ್ಷೆಗಾಗಿ ಆಸ್ಪತ್ರೆಗೆ ತೆಗೆದುಕೊಂಡು ಹೋದರು. ಮೃತನ ಶವವನ್ನು

ನೋಡಿದಾಗ ಯಾರೋ ವ್ಯಕ್ತಿಗಳು ಆತನ ತಲೆಗೆ ಹೊಡೆದು ಸಾಯಿಸಿದ್ದಾರೆ ಎಂದು ಕಂಡು ಬಂತು. ಆರೋಪಿಗಳನ್ನು ನಾನು ನೋಡಿಲ್ಲ ಮತ್ತು ಅವರ ಪರಿಚಯ ಇಲ್ಲ. ಪೊಲೀಸರು ನನಗೆ ಅವರನ್ನು ತೋರಿಸಿರುವುದಿಲ್ಲ. ಪೊಲೀಸರು ಆರೋಪಿಗಳನ್ನು ಕರೆದುಕೊಂಡು ಹೋಗಿ ನನ್ನ ಸಮಕ್ಷಮ ಯಾವುದೇ ವಸ್ತುಗಳನ್ನು ಜಪ್ತಿಪಡಿಸಿಲ್ಲ. ಈಗ ತೋರಿಸಿದ ಜಪ್ತಿ ಪಂಚನಾಮೆಯಲ್ಲಿ ನನ್ನ ಸಹಿ ಇದೆ. ಸದರಿ ಪಂಚನಾಮೆಯನ್ನು ನಿ.ಪಿ.7 ಎಂದು, ಸಾಕ್ಷಿಯ ಸಹಿಯನ್ನು ನಿ.ಪಿ.7(ಎ) ಎಂದು ಗುರುತಿಸಲಾಯಿತು. ಸದರಿ ಪಂಚನಾಮೆಗೆ ನಾನು ಠಾಣೆಯಲ್ಲಿ ಸಹಿ ಮಾಡಿದ್ದೇನೆ. ಮೃತನ ಬಟ್ಟೆಗಳನ್ನು ಜಪ್ತಿಪಡಿಸಲು ಮತ್ತು ಮೃತನನ್ನು ಗುರುತಿಸಲು ಆ ಪಂಚನಾಮೆ ಮಾಡಿದ್ದರು. ಈಗ 2 ಪಂಚನಾಮೆಗಳನ್ನು ತೋರಿಸಿದ್ದು ಸದರಿ ಪಂಚನಾಮೆಯಲ್ಲಿ ಇರುವ ಸಹಿಗಳನ್ನು ಸಾಕ್ಷಿ ಒಪ್ಪಿಕೊಂಡಿದ್ದರಿಂದ ದಿಃ25.02.2020 ರ ಪಂಚನಾಮೆ ಮತ್ತು ಅಮಾನತ್ತು ಪಂಚನಾಮೆಗಳನ್ನು ಕ್ರಮವಾಗಿ ನಿ.ಪಿ.8 ಮತ್ತು 9 ಎಂದು, ಸಾಕ್ಷಿಯ ಸಹಿಗಳನ್ನು ನಿ.ಪಿ.8(ಎ) ಮತ್ತು ನಿ.ಪಿ.9(ಎ) ಎಂದು ಗುರುತಿಸಲಾಯಿತು. ಅದೇ ರೀತಿ ದಿಃ29.02.2020 ರ ಅಮಾನತ್ತು ಪಂಚನಾಮೆ ಮತ್ತು ದಸ್ತಗಿರಿ ಹಾಗೂ ಜಪ್ತಿ ಪಂಚನಾಮೆಗಳಲ್ಲಿ ಇರುವ ಸಹಿಗಳನ್ನು ಸಾಕ್ಷಿ ಒಪ್ಪಿಕೊಂಡಿದ್ದು ಅವುಗಳನ್ನು ನಿ.ಪಿ.10 ಮತ್ತು 11 ಎಂದು ಸಾಕ್ಷಿಯ ಸಹಿಗಳನ್ನು ನಿ.ಪಿ.10(ಎ) ಮತ್ತು ನಿ.ಪಿ.11(ಎ) ಎಂದು ಗುರುತಿಸಲಾಯಿತು. ಪೊಲೀಸರು ನನ್ನ ಸಮಕ್ಷಮ ಆರೋಪಿತರಿಂದ ಯಾವುದೇ ವಸ್ತುಗಳನ್ನು ಜಪ್ತಿಪಡಿಸಿಲ್ಲ. ಪಂಚನಾಮೆಗಳಲ್ಲಿ ಏನು ಬರೆದಿದೆ ಎಂದು ನನಗೆ ಗೊತ್ತಿಲ್ಲ.

(ಈ ಹಂತದಲ್ಲಿ ಸಾಕ್ಷಿಯನ್ನು ಸರ್ಕಾರಿ ಅಭಿಯೋಜಕರು ಭಾಗಶಃ ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದಾರೆ. ಅನುಮತಿ ನೀಡಲಾಯಿತು.)

**<u>ಪಾಟೀ ಸವಾಲುಃ ಸರ್ಕಾರಿ ಅಭಿಯೋಜಕರಿಂದಃ</u>**

2. ದಿಃ18.07.2020 ರಂದು ಮಧ್ಯಾಹ್ನ 2.30 ರಿಂದ 3.30 ರವರೆಗೆ ಪೊಲೀಸರು ಸ್ಥಳದಲ್ಲಿ ನಿ.ಪಿ.4 ರಂತೆ ಮಹಜರ್ ಬರೆದು ಅದನ್ನು ಓದಿ ಹೇಳಿ ನನ್ನ ಸಹಿ ಪಡೆದಿದ್ದಾರೆ ಎಂದರೆ ನೆನಪಿಲ್ಲ. ಕೃತ್ಯ ನಡೆದ ಸ್ಥಳದಲ್ಲಿ ಸುಮಾರು 6 ಅಡಿ ಉದ್ದದ ದೊಣ್ಣೆಯನ್ನು ಜಪ್ತಿಪಡಿಸಿದ್ದಾರೆ ಎಂದರೆ ಸುಳ್ಳು. ಅದೇ ರೀತಿ ನಾನು ಪಂಚನಾಮಾ ಕಾಲದಲ್ಲಿ ಹಾಜರಿದ್ದ ಚಾಸಾ.1 ರಾಜೇಶ್ ರವರನ್ನು ವಿಚಾರಿಸಿದಾಗ ನ್ಯಾಯಾಲಯದ ಮುಂದೆ ಇರುವ ಆರೋಪಿಗಳು ಪ್ರಸನ್ನ ಕುಮಾರ್ ರವರನ್ನು ಅಪಹರಣ ಮಾಡಿ ಕೊಲೆ ಮಾಡಿದ್ದಾರೆ ಎಂದು ನನಗೆ ತಿಳಿಸಿದ್ದಾರೆ ಎಂಬುದಾಗಿ ಪೊಲೀಸರ ಮುಂದೆ ಈಗ ಓದಿ ಹೇಳಿದಂತೆ ಹೇಳಿಕೆ ಕೊಟ್ಟಿದ್ದೇನೆ ಎಂದರೆ ಸರಿಯಲ್ಲ. ಸದರಿ ಹೇಳಿಕೆಯನ್ನು ನಿ.ಪಿ.12 ಎಂದು ಗುರುತಿಸಲಾಯಿತು. ನಂತರ ಪೊಲೀಸರು ದಿಃ25.02.2020 ರಂದು ಬೆಳಿಗ್ಗೆ 09.30 ರಿಂದ 10.30 ರವರೆಗೆ 3 ನೇ ಆರೋಪಿಯ ವಶದಲ್ಲಿ ಇದ್ದ ಒಂದು ಸ್ಯಾಮ್ ಸಂಗ್ ಮೊಬೈಲ್ ಅನ್ನು ಮತ್ತು 4 ನೇ ಆರೋಪಿ ಬಳಿ ಇದ್ದ ಒಂದು ವಿವೊ ಕಂಪನಿಯ ಮೊಬೈಲ್ ಅನ್ನು ಆರೋಪಿತರು ಕೃತ್ಯಕ್ಕೆ ಉಪಯೋಗಿಸಿದ ಬೈಕ್ ಸಂಖ್ಯೆ ಕೆಎ-01/ಹೆಚ್ ಬಿ-7173 ವಾಹನವನ್ನು ನಿ.ಪಿ.7 ರ ಪಂಚನಾಮೆ ಅಡಿಯಲ್ಲಿ ಜಪ್ತಿಪಡಿಸಿದ್ದಾರೆ ಎಂದರೆ ಸುಳ್ಳು. ಅದೇ ದಿನ ಮಧ್ಯಾಹ್ನ 12.15 ಗಂಟೆಗೆ ನ್ಯಾಯಾಲಯದ ಮುಂದೆ ಹಾಜರಿರುವ 3 ಮತ್ತು 4 ನೇ ಆರೋಪಿಗಳನ್ನು ದಸ್ತಗಿರಿ ಮಾಡಿ ಠಾಣೆಯಲ್ಲಿ ಇಟ್ಟಿದ್ದು ಅವರನ್ನು ನಮ್ಮ ಸಮಕ್ಷಮ ವಿಚಾರಿಸಿದಾಗ ಪ್ರಸನ್ನ ಕುಮಾರ್ ರವರನ್ನು ಅಪಹರಣ ಮಾಡಿ ಕೊಲೆ ಮಾಡಿದ ಬಗ್ಗೆ ಒಪ್ಪಿಕೊಂಡಿದ್ದು ಕೊಲೆ ಮಾಡಲು ಉಪಯೋಗಿಸಿದ ದೊಣ್ಣೆಯನ್ನು ಹಾಜರುಪಡಿಸುವುದಾಗಿ ತಿಳಿಸಿ ಕೃತ್ಯ ನಡೆದ ಸ್ಥಳಕ್ಕೆ ಕರೆದುಕೊಂಡು ಹೋಗಿದ್ದಾರೆ ಎಂದರೆ

ಸುಳ್ಳು. ಆರೋಪಿಗಳು ಹಲ್ಲೆಗೆ ಉಪಯೋಗಿಸಿದ ದೊಣ್ಣೆಯನ್ನು ಸ್ಥಳದಲ್ಲಿ ಹಾಜರುಪಡಿಸಿದ್ದು ಅದನ್ನು ನಮ್ಮ ಸಮಕ್ಷಮ ನಿ.ಪಿ.9 ರ ಪಂಚನಾಮೆ ಅಡಿಯಲ್ಲಿ ಜಪ್ತಿಪಡಿಸಿದ್ದಾರೆ ಎಂದರೆ ಸುಳ್ಳು. ಈ ಬಗ್ಗೆ ನಾನು ಪೊಲೀಸರ ಮುಂದೆ ಹೇಳಿಕೆ ನೀಡಿದ್ದೇನೆ ಎಂದರೆ ಸರಿಯಲ್ಲ. ಸದರಿ ಹೇಳಿಕೆಯನ್ನು ನಿ.ಪಿ.13 ಎಂದು ಗುರುತಿಸಲಾಯಿತು.

3. ದಿಃ29.02.2020 ರಂದು ಬೆಳಿಗ್ಗೆ 10.00 ಗಂಟೆ ಸಮಯದಲ್ಲಿ 1, 2 ಮತ್ತು 5 ನೇ ಆರೋಪಿತರು ಕೃತ್ಯಕ್ಕೆ ಉಪಯೋಗಿಸಿದ ಬೈಕ್ ನಂಬರ್ ಕೆಎ-02/ಹೆಚ್ ಆರ್ 5966 ಅನ್ನು ಹಾಜರುಪಡಿಸಿದ ಮೇರೆಗೆ ಪೊಲೀಸರು ನಿ.ಪಿ.11 ರಂತೆ ಪಂಚನಾಮೆ ಮಾಡಿ ಜಪ್ತಿಪಡಿಸಿದ್ದಾರೆ ಎಂದರೆ ಸುಳ್ಳು. ನಂತರ ಅದೇ ದಿನ 1, 2 ಮತ್ತು 5 ನೇ ಆರೋಪಿತರು ಕೃತ್ಯಕ್ಕೆ ಉಪಯೋಗಿಸಿದ ದೊಣ್ಣೆಯನ್ನು ಬಚ್ಚಿಟ್ಟಿದ್ದು ಅದನ್ನು ಹಾಜರುಪಡಿಸುವುದಾಗಿ ಹೇಳಿಕೆ ನೀಡಿದ ಮೇರೆಗೆ ಮುದ್ದಿನಪಾಳ್ಯ ರಸ್ತೆಯ ಮೂಲಕ ಕಾಡಿನ ರೀತಿ ಇರುವ ಜಾಗಕ್ಕೆ ಹೋಗಿ ಪೊದೆಯಲ್ಲಿ ಬಚ್ಚಿಟ್ಟಿದ್ದ ಒಂದು ಮರದ ದೊಣ್ಣೆಯನ್ನು ಆರೋಪಿಗಳು ತೋರಿಸಿದ ಮೇರೆಗೆ ಮಧ್ಯಾಹ್ನ 1.00 ರಿಂದ 2.00 ಗಂಟೆ ಸಮಯದಲ್ಲಿ ನಿ.ಪಿ.10 ರಂತೆ ಪಂಚನಾಮೆ ಮಾಡಿ ಜಪ್ತಿಪಡಿಸಿದ್ದಾರೆ ಎಂದರೆ ಸುಳ್ಳು. ಈ ಬಗ್ಗೆ ನಾನು ಪೊಲೀಸರಿಗೆ ಅದೇ ದಿನ ಹೇಳಿಕೆ ನೀಡಿದ್ದೇನೆ ಎಂದರೆ ಸರಿಯಲ್ಲ. ಸದರಿ ಹೇಳಿಕೆಯನ್ನು ನಿ.ಪಿ.14 ಎಂದು ಗುರುತಿಸಲಾಯಿತು. ನನಗೆ ಎಲ್ಲಾ ವಿಚಾರಗಳು ತಿಳಿದಿದ್ದರೂ ಸಹ ಆರೋಪಿತರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**<u>ಪಾಟೀ ಸವಾಲುಃ ಆರೋಪಿ ಪರ ಶ್ರೀ.ಹೆಚ್ ಕೆ ವಕೀಲರಿಂದಃ</u>**

4. ಪಾಟೀ ಸವಾಲು ಇಲ್ಲ ಎಂದು ತಿಳಿಸಿರುತ್ತಾರೆ.

(ಮೇಲ್ಕಂಡ ಸಾಕ್ಷ್ಯವನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಿದೆ.)

ಓ. ಹೇ. ಕೇ. ಸ. ಸಹಿ ಮಾಡಿದ್ದಾರೆ.

(ವಿಜಯ್ ಕುಮಾರ್)
9 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು.